**O. S. No.206/2022**
**DW:1**

(ಇಂದು ದಿನಾಂಕಃ **01-08-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಚ್ ಎಸ್ ಕೆ ವಕೀಲರಿಂದಃ**

ನನ್ನ ಪ್ರತಿವಾದ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. 1 ನೇ ಪ್ರತಿವಾದಿಗೆ ಇಬ್ಬರೂ ಹೆಣ್ಣು ಮಕ್ಕಳಿದ್ದು ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಕಾಣಿಸಿರುತ್ತೇನೆ ಎಂದರೆ ಸರಿ. ಸದರಿಯವರ ಹೆಸರು ಹಾಗೂ ವಿವರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿಗೆ 3 ಜನ ಗಂಡು ಮಕ್ಕಳು ಮಾತ್ರ ಇದ್ದು, ಯಾವುದೇ ಹೆಣ್ಣು ಮಕ್ಕಳು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರ ಕುಟುಂಬದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಬೇರೆ ಆಸ್ತಿಗಳಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ವಾದಿ ಹಾಗೂ ಆತನ ಸಹೋದರರ ನಡುವೆ 2016 ರಲ್ಲಿ 1 ಜಮೀನಿನಲ್ಲಿ ಉಪ ಜೀವನಕ್ಕಾಗಿ ವಾಟ್ನಿಯಾಗಿದ್ದು, ಅವರಿಗೆ ತಲಾ 3 ಎಕರೆ ಜಮೀನು ಹಂಚಿಕೆಯಾಗಿತ್ತು ಎಂದರೆ ಸಾಕ್ಷಿಯು 2016 ರಲ್ಲಿ ಪಾಲು ವಿಭಾಗ ವಾಗಿತ್ತು ಎಂದು ತಿಳಿಸಿರುವುದಾಗಿ ನುಡಿದಿರುತ್ತಾರೆ. ವಾದಿ ಹಾಗೂ ಆತನ ಸಹೋದರರು ಎಲ್ಲಾ ಜಮೀನುಗಳಲ್ಲಿ ಪಾಲು ವಿಭಾಗ ಮಾಡಿಕೊಂಡಿರಲಿಲ್ಲ ಹಾಗೂ ಮೇಲೆ ಹೇಳಿದ ಜಮೀನನ್ನು ಉಪ ಜೀವನಕ್ಕಾಗಿ ಮಾತ್ರ ವಿಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು 2016 ರಲ್ಲಿ ಪಾಲು ವಿಭಾಗ ವಾಗಿತ್ತು ಎಂದು ತಿಳಿಸಿರುವುದಾಗಿ ನುಡಿದಿರುತ್ತಾರೆ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ 2 ನೇ ಪ್ರತಿವಾದಿಯೊಂದಿಗೆ ಮೀಲಾಪಿಯಾಗಿ ಖರೀದಿ ವ್ಯವಹಾರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಒಟ್ಟು ಕುಟುಂಬದ ಆದಾಯದಿಂದ ಸರ್ವೇ ನಂಃ 77/1 ಹಾಗೂ 78/1 ಗಳನ್ನು ಒಬ್ಬ ಗೂಡೆನ್ನವರ ಎನ್ನುವವರ ಕಡೆಯಿಂದ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಖರೀದಿ ಪತ್ರವನ್ನು ಸೃಷ್ಠಿ ಮಾಡಿಕೊಂಡು ಸುಳ್ಳು ಸಾಕ್ಷಿ  ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನಾನು ಕಬ್ಜಾದಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ.  ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**